ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 7/2/20

10 ಅರ್ಹರಿಗೆ ಕೊನೆಗೂ ಮಂತ್ರಿ ಪಟ್ಟ | ಹಠ ಹಿಡಿದು ಮಾತು ಉಳಿಸಿಕೊಂಡ ಸಿಎಂ ಬಿಎಸ್‌ವೈ

ಬಹುತೇಕ ಬಿಜೆಪಿ ಶಾಸಕರು ಗೈರು | ಖಾತೆ ಹಂಚಿಕೆ ನಾಳೆ | ಮುಂದಿನ ವಿಸ್ತರಣೆ ಜುಲೈನಲ್ಲಿ?

7-2-20

# ಮಿತ್ರ ಮಂಡಲ ವಿಸ್ತರಣೆ!

**ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಕಾರಣಕರ್ತರಾದ 10 ಶಾಸಕರನ್ನು ಮಂತ್ರಿ ಪಟ್ಟಕ್ಕೇರಿಸುವ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಮಾತನ್ನು ಉಳಿಸಿಕೊಂಡಿದ್ದಾರೆ. ಮಿತ್ರ ಮಂಡಳಿ ಎಂದು ಗುರುತಿಸಿಕೊಂಡಿದ್ದ 17 ಶಾಸಕರ ಪೈಕಿ ಉಪ ಚುನಾವಣೆಯಲ್ಲಿ ಗೆದ್ದ 11ರಲ್ಲಿ ಹತ್ತು ಮಂದಿಗೆ ಅಧಿಕಾರ ದೊರಕಿದೆ. ಹೀಗಾಗಿ ಗುರುವಾರ ನಡೆದ ಮಂತ್ರಿ ಮಂಡಲ ವಿಸ್ತರಣೆ 'ಮಿತ್ರ ಮಂಡಲ' ವಿಸ್ತರಣೆ ಎನಿಸಿದೆ.

ರಾಜಭವನದ ಗಾಜಿನಮನೆಯಲ್ಲಿ ಬೆಳಗ್ಗೆ ನಡೆದ ಸರಳ ಸಮಾರಂಭದಲ್ಲಿ ಸಿಎಂ ಬಿಎಸ್‌ವೈ ಸಮ್ಮುಖ ರಾಜ್ಯಪಾಲರು ಸಚಿವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಎಲ್ಲರೂ ಸಂಪುಟ ದರ್ಜೆ ಸಚಿವರಾಗಿದ್ದಾರೆ. ಈ ಸಮಾರಂಭಕ್ಕೆ ಸಚಿವ ಪದಾಕಾಂಕ್ಷಿಗಳಾಗಿದ್ದ ಮೂಲ ಬಿಜೆಪಿ ಶಾಸಕರು ಮತ್ತು ಹಲವು ನಾಯಕರು ಗೈರಾಗಿರುವುದು ಪಕ್ಷದೊಳಗಿನ ಅಸಮಾಧಾನವನ್ನು ಬಯಲು ಮಾಡಿದೆ.

ಈ ವಿಸ್ತರಣೆಯೊಂದಿಗೆ ಸಂಪುಟದ ಸದಸ್ಯರ ಸಂಖ್ಯೆ 28ಕ್ಕೆ ಏರಿದಂತಾಗಿದೆ. ಇನ್ನೂ 6 ಸ್ಥಾನಗಳು ಖಾಲಿಯಿವೆ. ಇದನ್ನು ತುಂಬಲು ಇನ್ನೂ ಆರು ತಿಂಗಳು ಕಾಯಬೇಕಾದೀತು ಎಂಬ ಸಂದೇಶವೂ ಬಿಜೆಪಿ ನಾಯಕರ ಅಸಮಾಧಾನ ಹೆಚ್ಚಿಸಿದೆ.

»02

**34** ಸಂಪುಟದ ಗಾತ್ರ

**28** ಹಾಲಿ ಇರುವ ಸಚಿವರು

**06** ಬಾಕಿ ಉಳಿದ ಸ್ಥಾನ

### 2ನೇ ಹಂತದ ವಿಸ್ತರಣೆ

ಬಿಎಸ್‌ವೈ ಸಿಎಂ ಆದ ಬಳಿಕ ಆಗಸ್ಟ್ 20 ರಂದು ಸಂಪುಟ ವಿಸ್ತರಿಸಿ 17 ಮಂದಿಗೆ ಸಚಿವ ಸ್ಥಾನ ನೀಡಿದ್ದರು. ಇದು 2ನೇ ಹಂತದ ಸಂಪುಟ ವಿಸ್ತರಣೆಯಾಗಿದೆ. ಮುಂದಿನದು ಜುಲೈನಲ್ಲಿ ನಡೆಯಬಹುದು ಎಂದು ಹೇಳಲಾಗುತ್ತಿದೆ.

**ಕಣ್ಣೀರು, ಅಪ್ಪುಗೆ, ಜೈಕಾರ** »03



ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಕೈಹಿಡಿದು ನಮಸ್ಕರಿಸಿದ ನಾರಾಯಣ ಗೌಡ, ಶಿವರಾಮ್ ಹೆಬ್ಬಾರ್.

## ದೂರ ಉಳಿದ ಆಕಾಂಕ್ಷಿಗಳು

ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದು, ಕೊನೆಯ ಕ್ಷಣದಲ್ಲಿ ರೆಡ್ ಸಿಗ್ನಲ್ ಪಡೆದ ಬಿಜೆಪಿ ಮೂಲ ಶಾಸಕರು ಸಮಾರಂಭದಿಂದ ದೂರ ಉಳಿದರು. ಉಮೇಶ್ ಕತ್ತಿ, ಸಿ.ಪಿ. ಯೋಗೀಶ್ವರ್, ಮುರುಗೇಶ್ ನಿರಾಣಿ ಸೇರಿದಂತೆ ಹಲವರು ಬರಲಿಲ್ಲ. ಡಿಸಿಎಂ ಪದವಿ ನಿರೀಕ್ಷೆಯಲ್ಲಿದ್ದ ಶ್ರೀರಾಮುಲು ಕೂಡಾ ಬಂದಿಲ್ಲ. ಅರಗ ಜ್ಞಾನೇಂದ್ರ, ಬಸವರಾಜ ಮಾಮನಿ ಸೇರಿದಂತೆ ಹಲವು ಶಾಸಕರು ನೇರವಾಗಿ ತಮ್ಮ ಬೇಡಿಕೆಯನ್ನು ಮುಂದಿಟ್ಟದ್ದು ವಿಶೇಷವಾಗಿತ್ತು.



ಶನಿವಾರದ ಒಳಗೆ ಖಾತೆ ಹಂಚಿಕೆ ಮಾಡುತ್ತೇನೆ. ಸಾಧ್ಯವಾದರೆ ಇನ್ನೊಮ್ಮೆ ದಿಲ್ಲಿಗೆ ಹೋಗಿ ಬರುತ್ತೇನೆ. ನಂತರ ಮುಂದಿನ ಪ್ರಕ್ರಿಯೆ ಕೈಗೊಳ್ಳುತ್ತೇನೆ.

-ಬಿ.ಎಸ್.ಯಡಿಯೂರಪ್ಪ, ಸಿಎಂ

**ಸಂಪುಟ ಸೇರಿದವರು** ಎಸ್.ಟಿ.ಸೋಮಶೇಖರ್, ರಮೇಶ್ ಜಾರಕಿಹೊಳಿ, ಆನಂದ್ ಸಿಂಗ್, ಡಾ.ಕೆ. ಸುಧಾಕರ್, ಬೈರತಿ ಬಸವರಾಜ್, ಶಿವರಾಂ ಹೆಬ್ಬಾರ್, ಬಿ.ಸಿ. ಪಾಟೀಲ್, ಕೆ.ಗೋಪಾಲಯ್ಯ, ನಾರಾಯಣ ಗೌಡ, ಶ್ರೀಮಂತ್ ಪಾಟೀಲ್.

### ಜಾತಿವಾರು ಪ್ರಾತಿನಿಧ್ಯ

| | |
|---|---|
| ಒಟ್ಟು ಸಚಿವರು | 28 |
| ಲಿಂಗಾಯತರು | 9 |
| ಒಕ್ಕಲಿಗರು | 7 |
| ಬ್ರಾಹ್ಮಣ 2, ಕುರುಬ | 2 |
| ಪರಿಶಿಷ್ಟ ವರ್ಗ | 2 |
| ಮರಾಠ 1, ರಜಪೂತ | 1 |
| ಬಂಜಾರ 1, ಪ. ಜಾತಿ | 2 |
| ಈಡಿಗ | 1 |

**ಡಿಕೆಶಿ ಕೋಟೆಗೆ, ಖಾತೆಗೆ ಜಾರಕಿಹೊಳಿ ಪಟ್ಟು** »03

**ಮೂಲ ಬಿಜೆಪಿ ಶಾಸಕರ ಅಸಮಾಧಾನ**